ದಿನಾಂಕಃ 17.06.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ.ಬಿ.ಕೆ. ವಕೀಲರಿಂದಃ

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ಪ್ರತಿವಾದಿಗೆ/ಕೃಷ್ಣೆಗೌಡ ಎನ್ನುವವರಿಗೆ ಒಬ್ಬ ಮಗನಿದ್ದು, ಒಬ್ಬ ಹೆಂಡತಿ ಇರುತ್ತಾರೆ. 1 ನೇ ಪ್ರತಿವಾದಿ ನಮ್ಮ ಗ್ರಾಮದವರು ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ನಮ್ಮ ಜಮೀನಿನ ಪಕ್ಕದಲ್ಲಿಯೇ ಇದೆ ಎಂದರೆ ಸರಿ. 1 ನೇ ಪ್ರತಿವಾದಿಯ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿಯೇ ಇದ್ದ ಕಾರಣ ನಾವು ಅವರು ವಿಶ್ವಾಸದಿಂದ ಇದ್ದು ಅವರ ಕುಟುಂಬದ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ. ನಮ್ಮ ಊರಿನಲ್ಲಿ ಸುಬ್ಬೆಗೌಡರ ಮಗ ನಾಗೇಗೌಡ ಎಂಬುವವರು ಇದ್ದಾರೆ ಎಂದರೆ ಸರಿ. ನಾಗೇಗೌಡರ ಜಮೀನು ನಮ್ಮ ಮನೆಯ ಪಕ್ಕದಲ್ಲಿಯೇ ಇರುತ್ತದೆ. ನಮ್ಮ ಮನೆಯ ಪಕ್ಕದಲ್ಲಿಯೇ ಅವರ ಜಮೀನು ಇರುವುದರಿಂದ ಅವರು ನಮಗೆ ಆತ್ಮಿಯರು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತು ನಾವು ಕರಾರು ಮಾಡುವ ಮುನ್ನ ಸದರಿ ನಾಗೇಗೌಡ ಅವರಿಗೆ ಕರಾರು ಒಪ್ಪಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ನಾಗೇಗೌಡರಿಗೆ ದಾವಾ ಅನುಸೂಚಿ ಸ್ವತ್ತಿನ ಸಂಬಂಧವಾಗಿ ಮಾಡಿದ ಕರಾರಿನ ಬಗ್ಗೆ ನನಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ನಾಗೇಗೌಡರಿಗೆ ಕ್ರಯದ ಕರಾರು ಬರೆದುಕೊಟ್ಟಿದ್ದು ಹಾಗೂ ಹಣ ಪಡೆದಿದ್ದು ಸದರಿ ದಿನದ ಕರಾರನ್ನು ರದ್ದು ಮಾಡಿ ನಂತರ ನನಗೆ ಕ್ರಯ ಪತ್ರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯದ ಕರಾರು ಪತ್ರದಲ್ಲಿ 1 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಮಗಳು ಸಹಿ ಮಾಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಪಲ್ಲವಿ ಎಂಬ ಮತ್ತೊಬ್ಬ ಮಗಳು ಇದ್ದಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪಲ್ಲವಿ ಎನ್ನುವವಳು ವಿದ್ಯಾವಂತಳಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರಕ್ಕೆ ಪಲ್ಲವಿ ಎನ್ನುವವರು ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಹಾಗೂ 2 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಸರಿ. ಪಲ್ಲವಿ ಎನ್ನುವವರಿಗೆ ಗೊತ್ತಾಗದ ಹಾಗೇ ಸದರಿ ಕ್ರಯದ ಕರಾರು ಪತ್ರ ಬರೆದು ಕೊಡುವುದಿಲ್ಲ ಎಂಬ ಕಾರಣಕ್ಕೆ ಸದರಿ ವಿಷಯವನ್ನು ಮುಚ್ಚಿ ಹಾಕಿ ಕೃಷ್ಣೇಗೌಡ ಹಾಗೂ ಅವರ ಹೆಂಡತಿ ಮತ್ತು ಮಗಳ ಸಹಿ ಪಡೆದಿರುತ್ತಿರಿ ಎಂದರೆ ಸರಿಯಲ್ಲ. ನಿಪಿ1 ರ ಕ್ರಯದ ಕರಾರು ಪತ್ರವನ್ನು ಸಬ್ ರಿಜಿಸ್ಟರ್ ಉಪನೊಂದಣಾಧಿಕಾರಿಯ ಕಛೇರಿಯ ಬಳಿ ಮಾಡಿಸಲಾಗಿರುತ್ತದೆ. ಸದರಿ ಪತ್ರವನ್ನು ಸುಮಾರು 12.00 ಗಂಟೆಯಿಂದ 2.00 ಗಂಟೆಯವರೆಗೆ ಬರೆದು ನೊಂದಣಿ ಮಾಡಿಸಲಾಗಿರುತ್ತದೆ. ಪ್ರತಿವಾದಿಗಳೆ ಕ್ರಯದ ಕರಾರು ಪತ್ರವನ್ನು ಬರೆದು ತಯಾರು ಮಾಡಿ ಇಟ್ಟಿಕೊಂಡಿದ್ದರು. ನಾನು

ತಾಲ್ಲೂಕು ಕಛೇರಿಯ ಬಳಿ 11.30 ಗಂಟೆಗೆ ಹೋಗಿದ್ದು ಸಂಜೆ ಸುಮಾರು 4.00/4.30 ಗಂಟೆ ಇರುತ್ತೇವೆ.

ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದುಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.